ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ:೦5:ಯೋಜನೆ:ಅ.ಬಿ:2021-22

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು. ದಿನಾಂಕ:19-11-2021

## ಸುತ್ತೋಲೆ

ವಿಷಯ: 2021-22ನೇ ಸಾಲಿನಲ್ಲಿ ಪ್ರಯಾಣ ವೆಚ್ಚಕ್ಕಾಗಿ ಬಿಡುಗಡೆ ಮಾಡಿರುವ ಅನುದಾನವನ್ನು ಬಳಕೆ ಮಾಡದಿರುವ ಬಗ್ಗೆ.

ಉಲ್ಲೇಖ: ಅನುದಾನ ಬಿಡುಗಡೆ ಆದೇಶ ಸಂಖ್ಯೆ:ಕಾಶಿಇ:೦5:ಯೋಜನೆ:ಅ.ಬಿ:2021-22 ದಿನಾಂಕ:08.10.2021.

--*--

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2021-22ನೇ ಸಾಲಿನಲ್ಲಿ ಉಲ್ಲೇಖಿತ ಆದೇಶದಲ್ಲಿ ಲೆಕ್ಕಶೀರ್ಷಿಕೆ:2202-03-103-2-01 ಇತರೆ ಸರ್ಕಾರಿ ಕಾಲೇಜುಗಳು, ಉಪಲೆಕ್ಕಶೀರ್ಷಿಕೆ (041)ರಡಿಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಿಬ್ಬಂದಿಗಳ ಪ್ರಯಾಣ ವೆಚ್ಚಕ್ಕಾಗಿ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. ಆದೇಶದಲ್ಲಿ ಅನುದಾನವನ್ನು ಕೂಡಲೇ ಬಳಸಿಕೊಂಡು ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸುವಂತೆ ಸೂಚಿಸಲಾಗಿರುತ್ತದೆ. ಆದರೂ ಸಹ ಸಂಬಂಧಪಟ್ಟ ಜಂಟಿ ನಿರ್ದೇಶಕರು ಅನುದಾನವನ್ನು ಬಳಸಿಕೊಂಡು ಇದುವರೆವಿಗೂ ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸುವುದಾಗಲಿ ಅಥವಾ ಅನುದಾನ ಅವಶ್ಯವಿಲ್ಲದಿದ್ದಲ್ಲಿ ಮರುಒಪ್ಪಿಸಿಲ್ಲದಿರುವುದು ಖಜಾನೆ-2ರ ವೆಚ್ಚಪಟ್ಟಿಯಿಂದ ತಿಳಿದು ಬಂದಿರುತ್ತದೆ (ಪ್ರತಿ ಲಗತ್ತಿಸಿದೆ).

ಆದ್ದರಿಂದ ಮೇಲ್ಕಂಡ ಆದೇಶಗಳಲ್ಲಿ ಬಿಡುಗಡೆಯಾಗಿರುವ ಅನುದಾನವನ್ನು ದಿ:26.11.2021ರ ಒಳಗಾಗಿ ವೆಚ್ಚ ಮಾಡಿ ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸುವಂತೆ ಹಾಗೂ ಅನುದಾನದ ಅಗತ್ಯತೆ ಇಲ್ಲದಿದ್ದಲ್ಲಿ ಕೂಡಲೇ ಮರು ಒಪ್ಪಿಸುವಂತೆ ತಿಳಿಸಲಾಗಿದೆ. ನಿಗಧಿತ ಅವಧಿಯಲ್ಲಿ ಮಾಹಿತಿಯನ್ನು ಸಲ್ಲಿಸದಿದ್ದಲ್ಲಿ ಯಾವುದೇ ಮುನ್ಸೂಚನೆಯನ್ನು ನೀಡದೇ ಅನುದಾನದ ಅವಶ್ಯಕತೆ ಇರುವುದಿಲ್ಲ ಎಂದು ಪರಿಗಣಿಸಿ ಅನುದಾನವನ್ನು ಹಿಂಪಡೆಯಲಾಗುವುದು ಹಾಗೂ ಬಳಕೆಯಲ್ಲಿ ವಿಳಂಬವಾಗಿರುವ ಹಾಗೂ ಬಳಕೆಗೆ ಕ್ರಮಕೈಗೊಳ್ಳದೇ ಇರಲು ಕಾರಣರಾದವರ ಮೇಲೆ ಸೂಕ್ತ ಹೊಣೆಗಾರಿಕೆಯನ್ನು ನಿಗಧಿಪಡಿಸಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ:

ಪ್ರಾದೇಶಿಕ ಜಂಟಿ ನಿರ್ದೇಶಕರು, ಬೆಂಗಳೂರು, ಮಂಗಳೂರು, ಮೈಸೂರು, ಶಿವಮೊಗ್ಗ, ಧಾರವಾಡ ಮತ್ತು ಕಲಬುರಗಿ-ಸೂಕ್ತ ಕ್ರಮಕ್ಕಾಗಿ.

ಪ್ರತಿಯನ್ನು:

1. ಮಾಹಿತಿ ಅಧಿಕಾರಿಗಳು, ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು-ಇಲಾಖಾ ಅಂತರ್ಜಾಲದಲ್ಲಿ ಪ್ರಕಟಿಸಲು ಸೂಚಿಸಿದೆ.
2. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಲೆಕ್ಕಶೀರ್ಷಿಕೆ:2202-03-103-2-01 ಇತರೆ ಸರ್ಕಾರಿ ಕಾಲೇಜುಗಳು ಉಪಲೆಕ್ಕಶೀರ್ಷಿಕೆ (041)ರಡಿಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಿಬ್ಬಂದಿಗಳ ಪ್ರಯಾಣ ವೆಚ್ಚಕ್ಕಾಗಿ ಅನುದಾನವನ್ನು ಬಿಡುಗಡೆ ಮಾಡಿರುವ ಅನುದಾನವನ್ನು ಬಳಕೆ ಮಾಡದಿರುವ ಬಗ್ಗೆ

# BDC007: DDO Fund Release and Expenditure Report

| Sr. No. | DDO Code | DDO Designation | Fund Received By DDO | Expenditure By DDO | | | |
|---|---|---|---|---|---|---|---|
| | | | | Pending | Pipeline | Total expenditure in K2 | Balance Available with K2 |
| Budgetline : | | 2202~03~103~2~01~041~V | | | | | |
| 1 | 180460 | JOINT DIRECTOR DEPARTMENT OF COLLEGIATE EDUCATION, REGIONAL OFFICE, BANGALORE | 20,000.00 | 0 | 0 | 0 | 20,000.00 |
| 2 | 183510 | JOINT DIRECTOR DEPARTMENT OF COLLEGIATE EDUCATION, REGIONAL OFFICE, SHIMOGA | 30,000.00 | 0 | 0 | 0 | 30,000.00 |
| 3 | 180930 | JOINT DIRECTOR DEPARTMENT OF COLLEGIATE EDUCATION, REGIONAL OFFICE, GULBARGA | 20,000.00 | 0 | 0 | 0 | 20,000.00 |
| 4 | 180890 | JOINT DIRECTOR DEPARTMENT OF COLLEGIATE EDUCATION, REGIONAL OFFICE, DHARWAD | 30,000.00 | 0 | 0 | 0 | 30,000.00 |
| 5 | 180780 | JOINT DIRECTOR DEPARTMENT OF COLLEGIATE EDUCATION, REGIONAL OFFICE, MANGALORE | 35,000.00 | 0 | 0 | 0 | 35,000.00 |
| 6 | 180500 | JOINT DIRECTOR DEPARTMENT OF COLLEGIATE EDUCATION, REGIONAL OFFICE, MYSORE | 15,000.00 | 0 | 0 | 0 | 15,000.00 |

ಕಾಲೇಜು ಶಿಕ್ಷಣ ನಿರ್ದೇಶಕರು